INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -1, January--February, 2025,
PageNo,32- 38
Peer -Reviewed, Refereed Journal

# ಪದ್ಮಾ ಗುರುರಾಜ್ ಅವರ 'ಬಂದಾನೋ ಬಾರನೋ' ಹಾಗೂ 'ಅಗ್ನಿದಿವ್ಯ' ಕಾದಂಬರಿಗಳಲ್ಲಿ ಶಿಕ್ಷಣ

ಪ್ರತಿಭಾ.ಸಿ.[1]

ಶಿಕ್ಷಣವು ಜೀವನದುದ್ದಕ್ಕೂ ನಡೆಯುವ ಪ್ರಕ್ರಿಯೆ. ಅದು ಮಾನವನ ಹುಟ್ಟಿನಿಂದ ಸಾವಿನವರೆಗೆ ನಡೆಯುವ ನಿರಂತರವಾದ ಅನುಭವಗಳ ಆಗರ. "ಋಗ್ವೇದದಲ್ಲಿ ಯಾವುದು ಮಾನವನನ್ನು ಸ್ವಾವಲಂಬಿಯನ್ನಾಗಿ ಮತ್ತು ನಿಸ್ವಾರ್ಥಿಯನ್ನಾಗಿ ಮಾಡುತ್ತದೋ ಅದುವೇ ಶಿಕ್ಷಣ". ಎಂದು ತಿಳಿಸಲಾಗಿದೆ. ಭಾರತೀಯ ಸಮಾಜದಲ್ಲಿ ಸ್ತ್ರೀ ಸಾಮಾಜಿಕ ಘಟಕದ ಭಾಗವೆಂದು ಪರಿಗಣಿತವಾಗದೇ ಇರುವ ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಸ್ತ್ರೀ ಶಿಕ್ಷಣವು ಸಹ ಅಪಮೌಲ್ಯವಾಗಿದೆ. ಭಾರತೀಯ ಪರಂಪರೆಯಲ್ಲಿ ಸ್ತ್ರೀ ಶಿಕ್ಷಣ ಎನ್ನುವುದು ಸಂಸ್ಕೃತಿಯೊಳಗೆ ವಿಶೇಷವಾಗಿ ಕೌಟುಂಬಿಕ ಭಾದ್ಯತೆಯ ಒಳಗೆ ಸಂರಚನೆಯಾಗಬೇಕಾದ ಸಂಗತಿಯೇ ಆಗಿದೆ. ಗೃಹಕಾರ್ಯವನ್ನು ಸಂಭಾಳಿಸುವ ಆಚೆಗಿನ ವಿದ್ಯೆ ಎಂಬುದನ್ನು ಗಮನಕ್ಕೆ ತಂದುಕೊಳ್ಳಲಾರದಷ್ಟು ಸಾಮಾಜಿಕ ನಿಯಂತ್ರಣ ಇದ್ದೇ ಇತ್ತು.

ಪದ್ಮಾ ಗುರುರಾಜ್ ಅವರು ತಮ್ಮ ಕಾದಂಬರಿಗಳಾದ 'ಅಗ್ನಿದಿವ್ಯ' ಮತ್ತು 'ಬಂದಾನೋ ಬಾರನೋ' ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣವನ್ನು ಕುರಿತು ಚರ್ಚಿಸಿದ್ದಾರೆ. ಪುರುಷ ಪ್ರಧಾನ್ಯತೆ ಇರುವ ಕುಟುಂಬದಲ್ಲಿ ಜನಸಿದ ಹೆಣ್ಣು ಮಕ್ಕಳು ಪುರುಷರಿಗೆ ಸಮಾನವಾಗಿ ಶಿಕ್ಷಣವನ್ನು ಪಡೆಯುವಲ್ಲಿ ಅವಳಿಗೆ ಎದುರಾಗುವ ಕಷ್ಟಗಳು ಎಂತಹದು, ತನಗಾಗುವ ಅನ್ಯಾಯವನ್ನು ಸಹಿಸಿಕೊಂಡು ತಾನು ಪಡೆದ ಶಿಕ್ಷಣದಿಂದ ತನ್ನ ಬದುಕನ್ನು ಹೇಗೆ ರೂಪಿಸಿಕೊಂಡು ಆರ್ಥಿಕ ಸ್ವಾವಲಂಬಿಯಾಗಬೇಕು. ತನ್ನ ಬದುಕಿನ ಪಥ ಬದಲಿಸಿಕೊಂಡು ಜೀವಿಸುವುದರ ಜೊತೆಗೆ ಸಂಪ್ರದಾಯಬದ್ಧ ಸಮಾಜದಲ್ಲಿ ಉತ್ತಮ ಸ್ಥಾನಮಾನವನ್ನು ಗಳಿಸಿಕೊಂಡು ಬದುಕಲು ಶಿಕ್ಷಣವು ಎಷ್ಟು ಅನಿವಾರ್ಯ ಎಂಬುವನ್ನು ಪದ್ಮಾ ಗುರುರಾಜ್‌ರವರ ಕಾದಂಬರಿಗಳಲ್ಲಿ ತಿಳಿಯಬಹುದಾಗಿದೆ.

---

**1.ಸಂಶೋಧನಾ ವಿದ್ಯಾರ್ಥಿನಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.**

**'ಬಂದಾನೋ ಬಾರನೋ' ಕಾದಂಬರಿಯಲ್ಲಿ ಶಿಕ್ಷಣ**

ಬಂದಾನೋ ಬಾರನೋ ಕಾದಂಬರಿಯಲ್ಲಿ ಗೋಪಾಲಯ್ಯ ಮತ್ತು ಸರಸಮ್ಮ ದಂಪತಿಗಳು ಸಾಮಾನ್ಯ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬವಾಗಿದ್ದು, ಕುರುಡು ಸಂಪ್ರದಾಯ ಮೌಢ್ಯಗಳಿಗೆ ಒಳಗಾಗಿರುವುದರ ಜೊತೆಗೆ ಪುರುಷ ಪ್ರಾಧ್ಯಾನತೆ ಆ ಮನೆಯಲ್ಲಿ ನೆಲೆಗೊಂಡಿರುತ್ತದೆ. ದಂಪತಿಗಳಿಗೆ ಚಿದಾನಂದನೆಂಬ ಗಂಡು ಮಗು ಜನಿಸಿದ ಮೇಲೆ ಒಂದೆರೆಡು ಮಕ್ಕಳು ಹುಟ್ಟಿ ಸತ್ತು ಕೆಲವು ಗರ್ಭಪಾತಗಳಾಗಿ ನಂತರ ಜನಿಸಿದವಳು ವಸುಂಧರ. ಹಾಗಾಗಿ ದಂಪತಿಗಳಿಗೆ ಒಬ್ಬನೇ ಮಗನಾದ ಚಿದಾನಂದನನ್ನು ಕಂಡರೆ ಹೆಚ್ಚು ಪ್ರೀತಿ. ಪ್ರತಿಯೊಂದರಲ್ಲೂ ಅವನಿಗೆ ಮೊದಲ ಸ್ಥಾನ. ಇರುವವನು ಒಬ್ಬನೇ ಕುಲ ಪುತ್ರ ತಮ್ಮ ಮನೆಯ ವಂಶೋದ್ಧಾರಕ, ತಮ್ಮ ಕೊನೆಗಾಲಕ್ಕೆ ಆಗುವವನು ಇವನೇ ಎಂಬ ನಂಬಿಕೆಯೊಂದಿಗೆ ಜೀವಿಸುತ್ತಾರೆ. ಹಾಗಾಗಿ ಮಗನಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಿಸಬೇಕು ಎಂದು ಚಿದಾನಂದನನ್ನು ಕಾನ್ವೆಂಟ್‌ಗೆ ಸೇರಿಸಿ ಓದಿಸುತ್ತಾರೆ. ಆದರೆ ವಸುಂಧರಳಿಗೆ ಹೆಣ್ಣು ಮಗಳಿಗೆ ಸ್ವಲ್ಪ ಮಟ್ಟಿಗೆ ವಿದ್ಯೆ ಕಲಿತರೆ ಸಾಕು ಎಂದು ಮನೆಯ ಹತ್ತಿರದ ಕನ್ನಡ ಶಾಲೆಗೆ ಸೇರಿಸುತ್ತಾರೆ.

ವಸುಂಧರಳು ಚಿಕ್ಕಂದಿನಿಂದಲೂ ಓದಿನಲ್ಲಿ ಅಪಾರ ಆಸಕ್ತಿ ಹೊಂದಿ ಕನ್ನಡ ಶಾಲೆಯಲ್ಲಿಯೇ ಕಲಿತು ಪ್ರತಿ ವರ್ಷ ಪ್ರಥಮ ದರ್ಜೆಯಲ್ಲಿಯೇ ತೇರ್ಗಡೆಯಾಗುತ್ತಿರುತ್ತಾಳೆ. ನಂತರ ಇರುವ ಸೌಲಭ್ಯವನ್ನೆಲ್ಲ ಸದುಪಯೋಗಪಡಿಸಿಕೊಂಡು ಚೆನ್ನಾಗಿ ಓದಿ ಪಿ.ಯು.ಸಿ ಯಲ್ಲಿ ರಾಜ್ಯಕ್ಕೆ ಏಳನೇಯ ರ್‍ಯಾಂಕ್ ಪಡೆಯುತ್ತಾಳೆ. ಆದರೆ ಚಿದಾನಂದ ವರ್ಷ ವರ್ಷಕ್ಕೂ ಎಡವುತ್ತ ಬಿ.ಇ ಮುಗಿಸಲು ಹರಸಹಾಸ ಪಡುತ್ತಾನೆ. ಆದರೂ ಕೂಡ ತಂದೆ ಗೋಪಾಲಯ್ಯನವರ ಬೆಂಬಲ ಮಾತ್ರ ಗಂಡು ಮಗನಾದ ಚಿಂದಾನಂದನಿಗೆ. ಮಗನ ಓದಿಗಾಗಿ ಎಷ್ಟೇ ಹಣವನ್ನಾದರೂ ಖರ್ಚು ಮಾಡಲು ಸಿದ್ಧರಿರುತ್ತಾರೆ. ಆದರೆ ಪ್ರತಿಭಾವಂತ ವಿದ್ಯಾರ್ಥಿನಿಯಾದ ವಸುಂಧರಳಿಗೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಸೀಟು ದೊರಕಿದರೂ ಕೂಡ ಅವಳಿಗೆ ಯಾವುದೇ ಬೆಂಬಲ ನೀಡುವುದಿಲ್ಲ. ಬದಲಾಗಿ ಗೋಪಾಲಯ್ಯನವರು "ಐದಾರು ವರ್ಷ ಇಂಜಿನಿಯರಿಂಗ್ ಮೆಡಿಕಲ್ ಓದಿಸೋಕೆ ಹಣ ಎಲ್ಲಿದೆ? ಇಷ್ಟಕ್ಕೂ ನೀನು ಓದಿ ಇಂಜಿನಿಯರ್ ಆಗಿ ಕಡಿಯೋದೇನಿದೆ? ಸುಮ್ನೆ ಡಿಗ್ರಿ ಕಾಲೇಜಿಗೆ ಸೇರ್ಕೋ ಒಂದು ಬಿ.ಎ, ಬಿ.ಎಸ್ಸಿ ಆದರೆ ಸಾಕು. ಆದಷ್ಟು ಬೇಗ ಮದುವೆ ಮಾಡಿ ಜವಾಬ್ದಾರಿ ಕಳ್ಕೊಬೇಕು."[1] ಎಂದು ಅಧಿಕಾರ ವಾಣಿಯಲ್ಲಿ ಒತ್ತಾಯ ಮಾಡಿದ್ದರು.

ಹೆಣ್ಣು ಮಕ್ಕಳು ಯಾವತ್ತಿದ್ದರೂ ಕೂಡ ಗಂಡನ ಮನೆ ಸೇರಬೇಕಾದವಳು, ಅವಳಿಗೆ ಹೆಚ್ಚು ಹಣ ಖರ್ಚು ಮಾಡಿ ಮೆಡಿಕಲ್ ಇಂಜಿನಿಯರಿಂಗ್ ಓದಿಸುವುದು ವ್ಯರ್ಥ ಆದ್ದರಿಂದ ನಮಗೆ ಯಾವ

ಪ್ರಯೋಜನವೂ ಸಹ ಇಲ್ಲ. ಹಾಗಾಗಿ ಅವಳು ಸಾಮಾನ್ಯ ಓದಿಗಷ್ಟೇ ಮೀಸಲು, ದುಬಾರಿ ವಿದ್ಯೆ ಅವಳಿಗೆ ಅವಶ್ಯಕತೆ ಇಲ್ಲ. ಬದಲಾಗಿ ಅವಳಿಗೆ ಬೇಗ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವುದಷ್ಟೇ ತಮ್ಮ ಜವಬ್ದಾರಿ ಎಂಬ ಮನಸ್ಥಿತಿ ಹೊಂದಿರುತ್ತಾರೆ. ಹಾಗಾಗಿ ವಸುಂಧರ ಮನಸ್ಸಿನಲ್ಲಿ ಬೆಟ್ಟದಷ್ಟು ಆಸೆ ಇದ್ದರೂ ಪ್ರತಿಭಟಿಸಲು ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಸರ್ಕಾರಿ ಡಿಗ್ರಿ ಕಾಲೇಜಿಗೆ ಸೇರಿ ಆಂಗ್ಲ ಭಾಷೆಯನ್ನೇ ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ ವಿಭಾಗಕ್ಕೆ ಸೇರಿ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿದಳು. ನಂತರ ಡಿಗ್ರಿ ಪದವಿಯಲ್ಲೂ ಎರಡನೇಯ ರ‍್ಯಾಂಕ್ ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಎಲ್ಲರ ಅಭಿನಂದನೆಗೂ ಪಾತ್ರಳಾದಳು. ಪತ್ರಿಕೆಗಳಲ್ಲೂ ಕೂಡ ವಸುಂಧರಳಿಗೆ ಅಭಿನಂದನೆ ದೊರೆಕಿತು.

ಆದರೆ ಗೋಪಾಲಯ್ಯನವರು ವಸುಂಧರ ಸಾಧನೆಯನ್ನು ಕಂಡರೂ ಸಹ ಮಗಳ ಬಗೆಗೆ ಯಾವುದೇ ಮೆಚ್ಚುಗೆ ನೀಡಿದೇ ಉದಸೀನದಿಂದಲೇ ಸ್ವೀಕರಿಸಿದರು. ನಂತರ ವಸುಂಧರ ಯಾರ ಮೆಚ್ಚುಗೆಯ ನುಡಿಗಳಿಗೆ ಅಪೇಕ್ಷಿಸದೇ ಮುಂದಿನ ಓದಿನ ಬಗ್ಗೆ ಚಿಂತಿಸುತ್ತಾ, ಎಂ.ಎ ಪದವಿಗೆ ಸೇರಲು ಇನ್ನಿಲ್ಲದಷ್ಟು ಪ್ರಯತ್ನ ಪಟ್ಟರೂ ಮನೆಯಲ್ಲಿ ಯಾರ ಪ್ರೋತ್ಸಾಹ ಒಪ್ಪಿಗೆ ಸಿಗಲಿಲ್ಲ. ಅವಳ ಓದಿಗೆ ವಿರೋಧವೇ ಗೋಡೆಯಂತೆ ಸುತ್ತುವರೆದು ನಿಂತಿತು. "ಎಷ್ಟು ಓದಿದರೂ ಸೌಟು ಹಿಡಿಯೋದು, ತೊಟ್ಟಿಲು ತೂಗೋದು ತಪ್ಪಿತ್ತೆ?".[2] ಎಂದು ಸರಸಮ್ಮ ನಿರುತ್ಸಾಹದ ಬರೆ ಎಳೆದಳು. ಸರಸರಮ್ಮನವರ ದೃಷ್ಟಿಯಲ್ಲಿ ಹೆಣ್ಣು ಮಕ್ಕಳು ಎಷ್ಟೇ ಓದಿದರೂ ಸಹ ಅವಳು ಅಡುಗೆ ಮನೆಗೆ ಮಾತ್ರ ಸೀಮಿತ. ಹೆಣ್ಣು ಮದುವೆ ಆಗಿ ಗಂಡ, ಮಕ್ಕಳು ಎಂದು ಸಂಸಾರದ ಜವಾಬ್ದಾರಿ ಹೊತ್ತರೆ ಸಾಕು. ಅವಳಿಗೆ ಈ ಓದು ಬರಹ ಎಲ್ಲವೂ ವ್ಯರ್ಥ ಎಂಬ ಸಂಕುಚಿತ ಮನೋಭಾವ ಹೊಂದಿರುವವರು. ಜೊತೆಗೆ ಮಗಳು ಹೆಚ್ಚು ಓದಿದರೆ ಅವಳಿಗೆ ತಕ್ಕಂತ ವರನನ್ನು ಹುಡುಕುವುದು ಕಷ್ಟ, ಮತ್ತೆ ಖರ್ಚು ಕೂಡ ಹೆಚ್ಚಾಗುತ್ತದೆ.

ಕಡಿಮೆ ಓದಿಸಿದರೆ ಕಡಿಮೆ ಖರ್ಚಿನಲ್ಲಿ ಎಲ್ಲವೂ ಮುಗಿಯುತ್ತದೆ ಎಂಬ ನಂಬಿಕೆಯಿಂದ ಮಗಳು ಹೆಚ್ಚು ಓದುವುದು ಬೇಡ ಎಂದು ವಿರೋಧ ವ್ಯಕ್ತಪಡಿಸುತ್ತಾರೆ. ಆದರೆ ವಸುಂಧರ ಮನೆಯವರ ವಿರೋಧದ ನಡುವೆಯೂ ಯಾರ ಒಪ್ಪಿಗೆಯನ್ನು ಸಹ ಕೇಳದೇ ಎಂ.ಎ ಪದವಿಗೆ ಅರ್ಜಿ ಹಾಕಿ ಉದ್ಯೋಗ ಮಾಡುತ್ತಲೇ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿ ಎಂ.ಎ ಪದವಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಾಳೆ. ನಂತರ ಬ್ಯಾಕಿಂಗ್ ಪರೀಕ್ಷೆಯನ್ನು ಕಟ್ಟಿ ತನ್ನ ಶ್ರಮದಿಂದ ಉದ್ಯೋಗ ಪಡೆಯುತ್ತಾಳೆ. ಅವಳ ಓದು ಅವಳ ಜೀವನಕ್ಕೆ ಆಧಾರವಾಗಿ ನಿಲ್ಲುತ್ತದೆ.

ಹೀಗೆ ಹೆಣ್ಣು ಮಕ್ಕಳು ತಮ್ಮ ಓದಿನಲ್ಲಿ ಎಷ್ಟೇ ಕಷ್ಟವಾದರೂ ಅದನ್ನೆಲ್ಲಾ ಎದುರಿಸಿ ಹೇಗೆ ತಮ್ಮ ಗುರಿಯನ್ನು ತಲುಪಬೇಕು ಎಂದು ತಿಳಿಯುವುದರ ಜೊತೆಗೆ, ಶಿಕ್ಷಣವು ಹೆಣ್ಣು ಮಕ್ಕಳಿಗೆ ಎಷ್ಟು ಅವಶ್ಯಕವಾದದ್ದು ಹಾಗೂ ಶಿಕ್ಷಣವು ಬದುಕನ್ನು ಹೇಗೆ ಬದಲಾಯಿಸಬಲ್ಲದು ಎಂಬುದನ್ನು ಲೇಖಕಿ ವಸುಂಧರ ಅವರು ಪಾತ್ರದ ಮೂಲಕ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

**ಅಗ್ನಿದಿವ್ಯ ಕಾದಂಬರಿಯಲ್ಲಿ ಶಿಕ್ಷಣ**

'ಅಗ್ನಿದಿವ್ಯ' ಕಾದಂಬರಿಯಲ್ಲಿ ವಿಜಯಮ್ಮ ಮತ್ತು ರಂಗರಾಜು ದಂಪತಿಗಳ ಮಕ್ಕಳಾದ ಸರಯೂ, ಅಲಕಾ, ಕೃಷ್ಣರಿಗೆ ಓದಿನ ಬಗ್ಗೆ ಯಾವ ಆಸಕ್ತಿಯೂ ಸಹ ಇಲ್ಲದೇ ತಾವು ವಿದ್ಯಾವಂತರಾಗಬೇಕು ಎಂಬ ಯಾವ ಆಸೆ ಕನಸುಗಳೂ ಇಲ್ಲದೇ ಪಿ.ಯು.ಸಿಯನ್ನು ದಾಟಲಾಗದೇ ಅರ್ಧದಲ್ಲೇ ತಮ್ಮ ಓದನ್ನು ಕುಂಠಿತಗೊಳಿಸಿದರು. ಬುದ್ಧಿ ಜೀವಿಯಾದ ಪ್ರೊಫೆಸರ್ ಆದ ರಂಗರಾಜರು ಶಿಕ್ಷಣದ ಮಹತ್ವವನ್ನರಿತು ತನ್ನ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗಬೇಕು ಎಂಬ ಕನಸನ್ನು ಸಾಕಾರಗೊಳಿಸಲು ಕಿರಿಯ ಮಗಳಾದ ಭುವನ ಜನಿಸಿದಳು. ಚಿಕ್ಕಂದಿನಿಂದಲೂ ಪುಸ್ತಕ ಪ್ರಿಯಳಾಗಿ ಬುದ್ಧಿವಂತೆ ಹುಡುಗಿಯಾಗಿದ್ದಳು. ಭುವನಳಿಗೆ ತಂದೆಯೇ ಮೊದಲ ಗುರುವಾಗಿ ತಮ್ಮ ಶಿಸ್ತು, ಶ್ರದ್ಧೆ, ಪಾಂಡಿತ್ಯವನ್ನು ಮಗಳಿಗೆ ಧಾರೆ ಎರೆದು ಪೋಷಿಸಿದರು. ಅದಕ್ಕೆ ತಕ್ಕಂತೆ ಭುವನ ಶಿಸ್ತಿನಿಂದ ಓದುತ್ತಾ ತರಗತಿಗಳಲ್ಲಿ ಯಾವಾಗಲೂ ಪ್ರಥಮ ದರ್ಜೆಯಲ್ಲೆ ಉತ್ತೀರ್ಣಗಳಾಗುತ್ತಿದ್ದಳು. "ನೀನು ಏನೆಲ್ಲಾ ಓದಿದರು ಓದಿಸುತ್ತೇನೆ. ಮಗೂ ಇಂಜಿನಿಯರಿಂಗ್, ಮೆಡಿಕಲ್ ಯಾವುದು? ಎಂದವಳಿಗೆ ವಿಫುಲ ಅವಕಾಶಗಳ ವರ್ಣರಂಜಿತ ಹೆಬ್ಬಾಗಿಲನ್ನೆ ತೆರೆದಿರಿಸಿದರು."[3] ರಂಗರಾಯರು ತಮ್ಮ ಮಗಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಿಸಬೇಕು. ಅದಕ್ಕೆ ಯಾವ ಕೊರತೆಯೂ ಬಾರದಂತೆ ನೋಡಿಕೊಂಡು ಮಗಳ ಇಚ್ಛೆಯ ಅನುಸಾರವಾಗಿ ತಂದೆಯ ಜವಬ್ದಾರಿ ನಿರ್ವಹಿಸಿದರೆ, ತಾಯಿ ವಿಜಯಮ್ಮಳಿಗೆ ವಿದ್ಯೆ, ಶಿಕ್ಷಣ ಅಧ್ಯಯನದ ಬಗ್ಗೆ ಯಾವ ಗೌರವವೂ ಇಲ್ಲದೇ "ಇಷ್ಟಕ್ಕೂ ಹೆಂಗಸು ಓದಿ ಯಾವ ರಾಜ್ಯ ಆಳಬೇಕಾಗಿದೆ? ಎಷ್ಟು ಓದಿದರೂ ಸೌಟು ಹಿಡಿಯೊದು ತೊಟ್ಟಿಲು ತೂಗೋದು ತಪ್ಪಿತ್ತೆ?"[4] ಎಂದು ಹೆಣ್ಣು ಮಕ್ಕಳು ಶಿಕ್ಷಣ ಕಲಿಯುವುದರ ಬಗೆಗೆ ತಾತ್ಸಾರದ ನುಡಿಗಳನ್ನಾಡುತ್ತಾರೆ. ಹೆಣ್ಣು ಮಕ್ಕಳು ಗೃಹಕಾರ್ಯವನ್ನು ಸಲೀಸಾಗಿ ನಡೆಸಿಕೊಂಡು, ಗಂಡ–ಮಕ್ಕಳನ್ನು ನೋಡಿಕೊಂಡು ಅಡುಗೆ ಕೆಲಸವನ್ನು ಕಲಿತುಕೊಂಡರೆ ಸಾಕು.

ಶಿಕ್ಷಣದ ಅವಶ್ಯಕತೆ ಹೆಣ್ಣು ಮಕ್ಕಳಿಗೆ ಅನವಶ್ಯಕ ಎಂಬ ಪರಂಪರಾನುಗುತ ಧೋರಣೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಭುವನ, ತಾಯಿ ವಿಜಯಮ್ಮನ ಮನೋಧೋರಣೆಯ ವಿರುದ್ಧವಾಗಿ ತಂದೆಯ ಸಹಕಾರದೊಂದಿಗೆ ಓದಿನಲ್ಲಿ ಶ್ರದ್ದೆ, ಆಸಕ್ತಿ ಇದ್ದುದರಿಂದ "ಅಪ್ಪಾಜಿ... ನಾನು ಸ್ಟಾಟಿಸ್ಟಿಕ್‌ನಲ್ಲಿ ಎಂ.ಎಸ್ಸಿ ಮಾಡ್ತೀನಿ. ಆಮೇಲೆ ಐ.ಎ.ಎಸ್ ಮಾಡ್ತೀನಿ. ಆಮೇಲೆ ಐ.ಎ.ಎಸ್. ಆಫೀಸರ್ ಆಗಬೇಕು ನಾನು."[5]

ಎಂದು ತನ್ನ ಮನದಿಂಗತವನ್ನು ತಿಳಿಸುತ್ತಾಳೆ. ನಂತರ ಭುವನ ತನ್ನ ಮಹಾತ್ವಾಕಾಂಕ್ಷೆಯ ಗುರಿಯನ್ನು ತಲುಪಲು ಬೇಕಾದ ದಾರಿಯಲ್ಲೆ ಸಾಗಲು ಅದಕ್ಕೆ ಬೇಕಾದ ಎಲ್ಲಾ ತಯಾರಿಯನ್ನು ಅವಳು ನಡೆಸಿದಳು.

ಭುವನಳ ತಂದೆ ಕೆಲಸ ಮಾಡುವ ಪ್ರತಿಷ್ಠಿತ ಕಾಲೇಜಿನಲ್ಲಿ ತನಗೆ ಬೇಕಾದ ವಿಷಯವನ್ನು ತೆಗೆದುಕೊಂಡು ಚೆನ್ನಾಗಿ ಓದಿ ಪ್ರಥಮ ರ್‍ಯಾಂಕ್ ಪಡೆದು ಉತ್ತೀರ್ಣಳಾಗುತ್ತಾಳೆ. ಮಗಳು ಬಿ.ಎಸ್ಸಿ ಮುಗಿಸುತ್ತಿದ್ದಂತಯೇ ಅವಳು ಓದಿರುವುದು ಸಾಕು ಅವಳಿಗೆ ಬೇಗ ಮದುವೆ ಮಾಡಿ ಮುಗಿಸಿದರೆ ಸಾಕು ತಮ್ಮ ಜವಬ್ದಾರಿ ಮುಗಿಯುತ್ತದೆ. ಎಂದು ಗಂಡನ ಬಳಿ ಒತ್ತಡ ತರುತ್ತಾಳೆ. "ಹೆಣ್ಣು ಹುಡುಗಿಯರಿಗೇಕೆ ಹೆಚ್ಚಿನ ವಿದ್ಯೆ? ಮನೆ ಬಿಟ್ಟು ಉದ್ಯೋಗಕ್ಕೆ ಹೋಗಿ ಸಾಧಿಸುವುದಾದರೂ ಏನಿದೆ? ಅಚ್ಚುಕಟ್ಟಾಗಿ ಸಂಸಾರ ನಿಭಾಯಿಸಿಕೊಂಡಿದ್ದರೆ ಸಾಲದೇ?".[6] ಎಂದು ತಮ್ಮ ಸಂಪ್ರಾದಾಯಬದ್ಧ ಧೋರಣೆಯನ್ನು ವ್ಯಕ್ತಪಡಿಸುತ್ತಾರೆ. ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯೆಯ ಅವಶ್ಯಕತೆಯೇ ಇಲ್ಲ, ಆಕೆ ಅಡುಗೆ ಮನೆಗೆ ಸೀಮಿತವಾಗಿದ್ದರೆ ಅಷ್ಟೇ ಸಾಕು, ಅದೇ ಅವಳ ಪ್ರಪಂಚವಾಗಿರಬೇಕು, ಅದರಾಚೆಗೆ ಅವಳು ಓದಿ ಉದ್ಯೋಗಕ್ಕೆ ಸೇರಿ ಸಾಧಿಸುವುದು ಎಲ್ಲವೂ ನಿಷ್ಪಯೋಜಕ ಎಂಬ ಧೋರಣೆಯ ವಿರುದ್ಧವಾಗಿ ಭುವನ ಹಗಲು–ರಾತ್ರಿ ಓದುತ್ತಾ ತನ್ನ ಕನಸನ್ನು ನನಸಾಗಿಕೊಳ್ಳುವ ದಾರಿಯತ್ತಾ ಸಾಗಿದಳು. ಇದರ ಜೊತೆಗೆ ಅಣ್ಣ ಕೃಷ್ಣನಿಗೆ ಮದುವೆ ಮಾಡಿ ಅತ್ತಿಗೆ ಕಸ್ತೂರಿಯು ಮನೆಗೆ ಬಂದ ಮೇಲೆ ಮನೆಯಲ್ಲಿ ಸದಾ ಕಿರಿಕಿರಿ ಗಲಾಟೆಗಳಿಂದಾಗಿ ಭುವನ ತನ್ನ ಓದನ್ನು ಅಂತಹ ವಾತಾವರಣದಲ್ಲಿ ಮುಂದುವರಿಸಲಾಗದೇ ಪ್ರೊಫೆಸರ್‌ರವರ ಸಹಾಯದಿಂದ ಹಾಸ್ಟೇಲ್ ಸೇರಿ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾಳೆ. ಆದರೆ ಸದಾ ಅವಳ ವಿದ್ಯಾಭ್ಯಾಸಕ್ಕೆ ಬೆನ್ನಲುಬಾಗಿ ನಿಂತಿದ್ದಂತಹ ತಂದೆ ರಂಗರಾಜು ಅವರು ಇದ್ದಕ್ಕಿಂದತೆಯೇ ಹೃದಯಾಘಾತದಿಂದ ಸಾಯುತ್ತಾರೆ. ಮುಂದೆ ಏನು ಎಂಬ ಪ್ರಶ್ನೆ ಎದುರಾಗಿ ಏನೂ ತೋಚದೆ ಇರುವಾಗ ತಂದೆಯ ವಿಲ್ ಅವಳ ನೆರವಿಗೆ ಬರುತ್ತದೆ.[7] ರಂಗರಾಜುರವರು ತಾವು ಇಲ್ಲದೇ ಇದ್ದರೂ ತಮ್ಮ ಮಗಳ ವಿದ್ಯಾಭ್ಯಾಸಕ್ಕೆ ಯಾವ ಕೊರತೆಯೂ ಆಗಬಾರದು ಎಂದು ಅವಳ ಗುರಿ ತಲುಪಿಸುವ ಸಲುವಾಗಿ ಅವಳ ಖಾತೆಗೆ ಒಂದು ಲಕ್ಷ ಹಣವನ್ನು ಜಮಾ ಮಾಡಿಸಿರುತ್ತಾರೆ. ಜೊತೆಗೆ ಮಗಳು ಮದುವೆ ಆಗುವ ತನಕ ಮನೆ ಅವಳಿಗೆ ಸೇರತಕ್ಕದ್ದು ಎಂಬ ಖರಾರನ್ನು ಕೂಡ ಮಾಡಿಸಿ ಮಗಳ ಓದಿಗೆ ಯಾವ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಿರುತ್ತಾರೆ. ಹಾಗಾಗಿ ಭುವನ ಮತ್ತೆ ಹಾಸ್ಟೇಲ್ ವಾಸಿಯಾಗಿ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾಳೆ. ವಯೋಸಹಜವಾಗಿ ಅವಳು ಪ್ರೀತಿ ಪ್ರೇಮದ ಬಲೆಗೆ ಸಿಲುಕಿದರೂ ಕೂಡ ತನ್ನ ಗುರಿಯನ್ನು ಎಂದೂ ಸಹ ಮರೆಯಲಿಲ್ಲ.

ಗ್ರಂಥಾಲಯಕ್ಕೆ ಭೇಟಿ ನೀಡಿ ನೋಟ್ಸ್ ಮಾಡುತ್ತಾ ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸುತ್ತಾ ಅರ್ಥವಾಗದ ವಿಷಯಗಳ ಕುರಿತಾಗಿ ಉಪನ್ಯಾಸಕರೊಂದಿಗೆ ಚರ್ಚಿಸುತ್ತಾ ಐ.ಎ.ಎಸ್. ಪರೀಕ್ಷೆಗೆ ಬೇಕಾದ

ಎಲ್ಲಾ ತಯಾರಿಯನ್ನು ನಡೆಸಿ ಪ್ರಥಮ ಹಂತದ ಪರೀಕ್ಷೆಯನ್ನು ಪಾಸು ಮಾಡುತ್ತಾಳೆ. ನಂತರ ಸತತ ಅಧ್ಯಯನ ಕಠಿಣ ಪರಿಶ್ರಮದೊಂದಿಗೆ ಐ.ಎ.ಎಸ್. ಫೈನಲ್ ಪರೀಕ್ಷೆಯನ್ನು ತೆಗೆದುಕೊಂಡು ಹಗಲು–ರಾತ್ರಿಗಳನ್ನದೇ ಸದಾ ಓದುತ್ತಾ ಮುಖ್ಯ ಪರೀಕ್ಷೆಯನ್ನು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣಳಾಗಿ ತನ್ನ ಗುರಿಯನ್ನು ಸಾಧಿಸುತ್ತಾಳೆ.[8]

ಮೌಢ್ಯ ಸಂಪ್ರದಾಯದ ನಡುವೆಯೂ ಮಹಿಳೆಯರು ತಮಗಾಗುವ ಕಷ್ಟಗಳಿಗೆ ಕುಗ್ಗದೇ, ಧೈರ್ಯವಾಗಿ ಎಲ್ಲವನ್ನೂ ಎದುರಿಸಿ ಶಿಕ್ಷಣವನ್ನು ಪಡೆದು ಉನ್ನತ ಹುದ್ದೆಯನ್ನು ಅಲಂಕರಿಸಿ, ತನ್ನ ಗುರಿಯನ್ನು ಸಾಧಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳಿಸುವುದನ್ನು ಲೇಖಕಿ ಇಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಡಾ.ತಾರಿಣಿ ಶುಭದಾಯಿನಿ – ಸ್ತ್ರೀ ಶಿಕ್ಷಣ: ಚರಿತ್ರೆಯ ಹೆಜ್ಜೆಗಳು
2. ಪದ್ಮಾ ಗುರುರಾಜ್ – ಬಂದಾನೊ ಬಾರನೋ, ಪುಟ ಸಂಖ್ಯೆ– 30
3. ಅದೇ ಪುಟ ಸಂಖ್ಯೆ– 39
4. ಪದ್ಮಾ ಗುರುರಾಜ್ – ಅಗ್ನಿ ದಿವ್ಯ, ಪುಟ ಸಂಖ್ಯೆ– 8
5. ಅದೇ ಪುಟ ಸಂಖ್ಯೆ– 2
6. ಅದೇ ಪುಟ ಸಂಖ್ಯೆ– 8
7. ಅದೇ ಪುಟ ಸಂಖ್ಯೆ– 12
8. ಡಾ.ವೈ.ಎನ್. ಶ್ರೀಧರ್– ಶಿಕ್ಷಣದ ತಾತ್ವಿಕ ನೆಲೆ